


# ಮರುಳು ಮಾಡುವ ಮರಳು ಶಿಲ್ಪಕಲೆ

ಜಗತ್ತಿನ ಪ್ರತಿರೂಪವನ್ನೇ ಸೃಷ್ಟಿಸಿ ಅಚ್ಚರಿಯನ್ನು ಕಲಾವಿದರು ಮೂಡಿಸುತ್ತಾರೆ. ವರ್ಣ, ಶಿಲ್ಪ, ಲೋಹ, ಮರದಲ್ಲಿ ವಿಸ್ಮಯದ ರೂಪವನ್ನೇ ಅವರು ಅಚ್ಚು ಒತ್ತುವುದನ್ನು ಕಾಣುತ್ತೇವೆ. ತಮ್ಮ ಕುಶಲ ಮತಿಗೆ ಮರಳಿನಲ್ಲಿ ಕಲೆಯನ್ನು ಅರಳಿಸುವ ಸಾಧಕರು ಅಪರೂಪಕ್ಕೆ ಅಲ್ಲಲ್ಲಿ ಕಾಣಸಿಗುತ್ತಾರೆ. ಮರಳನ್ನೇ ಆಧರಿಸಿ ದೃಶ್ಯಕಾವ್ಯಕ್ಕೆ ಜೀವ ತುಂಬುವವರ ಪ್ರಮಾಣ ತೀರ ಕಡಿಮೆ. ಅಂತಹ ಅಪರೂಪದ ಕ್ಷೇತ್ರದಲ್ಲಿ ಮೈಸೂರಿನ ಎಂ.ಎನ್. ಗೌರಿ ಒಬ್ಬರಾಗಿದ್ದಾರೆ.

ಮರಳು ಕಲೆಯಲ್ಲಿ ಕಳೆದ 9 ವರ್ಷಗಳಿಂದ ಕೆಲಸ ಮಾಡುತ್ತಿರುವ ಗೌರಿ, ತಮ್ಮ ಕುಶಲಮತಿಯಿಂದ ಅಂತರರಾಷ್ಟ್ರೀಯಮಟ್ಟದಲ್ಲಿ ತಮ್ಮ ಕಲೆಯ ಛಾಪನ್ನು ಮೂಡಿಸಿದ್ದಾರೆ. 2013ರಲ್ಲಿ ಒರಿಸ್ಸಾದಲ್ಲಿ ಜರುಗಿದ ಅಂತರರಾಷ್ಟ್ರೀಯ ಮರಳು ಕಲಾಕೃತಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ 27 ಸ್ಪರ್ಧಿಗಳಲ್ಲಿ ಗೌರಿ ಏಕಮಾತ್ರ ಮಹಿಳೆ. ಫೈನ್‌ಆರ್ಟ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರ ಒಲವು ಮರಳು ಶಿಲ್ಪದತ್ತ ಹೊರಳಿದೆ. ಮೊದಲ ಬಾರಿಗೆ ಗೌರಿ ಮೈಸೂರಿನ ಸುತ್ತೂರು ಮಠದಲ್ಲಿ ಈಶ್ವರನ ಮರಳ ಮೂರ್ತಿಯನ್ನು ರೂಪಿಸಿದ್ದರು. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ 'ಗೌರಿ ಮರಳು ಕಲಾಕೃತಿ ಮ್ಯೂಸಿಯಂ' ಸ್ಥಾಪಿಸಿದ್ದು ಅಲ್ಲಿ ನೂರಾರು ಕಲಾಕೃತಿಗಳು ಭಾವ ಸಂವೇದನೆಯನ್ನು ಮಾಡುತ್ತಿವೆ. ಇಲ್ಲಿನ ಕಲಾಕೃತಿಗಳು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿವೆ.

ಸೌದಿ ಅರೇಬಿಯಾದಲ್ಲಿ ಇತ್ತೀಚೆಗೆ ನಡೆಸಿದ 'ಕ್ಯಾಮಲ್ ಉತ್ಸವ'ಕ್ಕೆ ಸ್ಥಳೀಯ ಸರ್ಕಾರ ಗೌರಿ ಅವರನ್ನು ಗೌರವಪೂರ್ವಕ ಆಹ್ವಾನಿಸಿ ಪುರಸ್ಕರಿಸಿದೆ. ಅಲ್ಲಿ ಅವರು ಮೂಡಿಸಿದ ಮರಳು ಕಲಾಕೃತಿಗಳು ವಿಶ್ವಮಾನ್ಯವಾಗಿವೆ. ಅವರ ಕೈಯಲ್ಲಿ ತ್ರಿವಿಧ ದಾಸೋಹಿ ಸಿದ್ಧಗಂಗಾ ಶ್ರೀ, ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಸೇರಿದಂತೆ ಹಲವು ವ್ಯಕ್ತಿತ್ವಗಳ ಸಾಧನೆಯ ಮೈಲುಗಲ್ಲುಗಳನ್ನು ಅವರು ಕಲೆಯಲ್ಲಿ ಸೆರೆಹಿಡಿದಿಟ್ಟಿದ್ದಾರೆ. ಸದ್ಯ ಕೆನಡಾದ ಟೊರೆಂಟೊದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

■ **ಟಿ.ಎಸ್. ಪ್ರತಿಭಾ, ಚಿತ್ರದುರ್ಗ**





